# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ

## ಪ್ರಕರಣ ಸಂಖ್ಯೆ: ಎಸ್.ಸಿ. ನಂ.37/2025

Pw-02

Cw-02

ಸಾಕ್ಷಿದಾರರ ಹೆಸರುಃ ಶ್ರೀ ಉಮೇಶ ಬಿಂಗಾಪುರ

ತಂದೆ:ಗಂಡನ ಹೆಸರುಃ ಶ್ರೀ ಪರಸಪ್ಪ

ವಯಸ್ಸುಃ 38 ವರ್ಷ

ಉದ್ಯೋಗಃ ಕೂಲಿ

ವಾಸ ಸ್ಥಳಃ ಕೊಪ್ಪರಸಿಕೊಪ್ಪ ತಾಃ ಹಾನಗಲ್

**ದಿನಾಂಕ:05.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ದಿನಾಂಕಃ27.12.2024 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ನಾನು ನಮ್ಮೂರಿನಲ್ಲಿದ್ದೆನು. ಆಗ ಹಾನಗಲ್ ಪೊಲೀಸರು ಅಲ್ಲಿಗೆ ಬಂದರು. ಸದರಿ ಪೊಲೀಸರು ನನಗೆ ಮತ್ತು ಚಾಸಾ-3 ನಾಗರಾಜ್ ರವರಿಗೆ ಪಂಚನಾಮೆ ಸಾಕ್ಷಿಗೆ ಬನ್ನಿ ಎಂದು ತಿಳಿಸಿದರು. ಆಗ ಪೊಲೀಸರು ನನ್ನನ್ನು ಮತ್ತು ಚಾಸಾ-3 ರವರನ್ನು ಬಸಪ್ಪ ಓಲೇಕಾರ ರವರ ಮನೆ ಹತ್ತಿರ ಘಟನಾ ಸ್ಥಳಕ್ಕೆ ಕರೆದುಕೊಂಡು ಹೋದರು. ಪೊಲೀಸರು ಸದರಿ ಸ್ಥಳದಲ್ಲಿ ಪರಿಶೀಲನೆ ಮಾಡಿ ಅಲ್ಲಿ ಬಿದ್ದಿರುವ ಕಟ್ಟಿಗೆ, ಕಲ್ಲು, ಮಣ್ಣು, ಒಂದು ಚೆಕ್ಸ ಲುಂಗಿ ಬಟ್ಟೆ, ಚಪ್ಪಲಿಗಳು ಇವುಗಳನ್ನು ವಶಪಡಿಸಿಕೊಂಡರು. ಪೊಲೀಸರು ಸದರಿ ವಸ್ತುಗಳನ್ನು ಪ್ಯಾಕ್ ಮಾಡಿದರು. ಈ ಕುರಿತು ಪೊಲೀಸರು ಸ್ಥಳದಲ್ಲಿ ಪೋಟೋ ತೆಗೆದರು. ಪೊಲೀಸರು ನಮ್ಮ ಸಮಕ್ಷಮ ಪಂಚನಾಮೆ ಮಾಡಿ, ನಮ್ಮ ಸಹಿಗಳನ್ನು ಪಡೆದುಕೊಂಡರು. ಪೊಲೀಸರು ಸ್ಥಳದಲ್ಲಿ ನಕಾಶೆಯನ್ನು ತೆಗೆದರು.

2. ಪೊಲೀಸರು ಜರುಗಿಸಿದ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-1 ಎಂದು, ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಕಾಶೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-2 ಎಂದು, ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಈಗ ನನಗೆ 2 ಪೋಟೋಗಳನ್ನು ತೋರಿಸುತ್ತಿದ್ದು, ಅದರಲ್ಲಿ ನನ್ನ ಭಾವಚಿತ್ರಗಳು ಇರತ್ತವೆ. ಸಾಕ್ಷಿಯು ಸದರಿ ಪೋಟೋಗಳಲ್ಲಿ ತನ್ನ ಇರುವಿಕೆ ನೋಡಿ ಗುರುತಿಸಿರುತ್ತಾರೆ.

3. ಪೊಲೀಸರು ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡುವ ಕಾಲಕ್ಕೆ ವಶಪಡಿಸಿಕೊಂಡ ವಸ್ತುಗಳನ್ನು ಪುನಃ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ control swab ನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ-1 ಎಂದು, blood swab ನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ-2 ಎಂದು, ಮತ್ತೊಂದು

blood swab ನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ–3 ಎಂದು, control soil ನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ–4 ಎಂದು, ash mixed soil ನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ–5 ಎಂದು, blood stained wooden piece ನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ–6 ಎಂದು, ಮತ್ತೊಂದು blood stained wooden piece ನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ–7 ಎಂದು, ಇನ್ನೊಂದು blood stained wooden piece ನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ–8 ಎಂದು, ಮತ್ತೊಂದು blood stained wooden piece ನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ–9 ಎಂದು, 9 ಚಪ್ಪಲಿಗಳು ಇರುವ ಹಾರವನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ– 10 ಎಂದು, ಒಂದು ಕಾಡು ಕಟ್ಟಿಗೆ ಬಡಿಗೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ– 11 ಎಂದು, ಇನ್ನೊಂದು ಕಾಡು ಕಟ್ಟಿಗೆ ಬಡಿಗೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ– 12 ಎಂದು, ಮತ್ತೊಂದು ಕಾಡು ಕಟ್ಟಿಗೆ ಬಡಿಗೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ– 13 ಎಂದು, ಇನ್ನೊಂದು ಕಾಡು ಕಟ್ಟಿಗೆ ಬಡಿಗೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ– 14 ಎಂದು, ಇನ್ನೊಂದು ಕಾಡು ಕಟ್ಟಿಗೆ ಬಡಿಗೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ– 15 ಎಂದು, ಇನ್ನೊಂದು ಕಾಡು ಕಟ್ಟಿಗೆ ಬಡಿಗೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ– 16 ಎಂದು, ಒಂದು ಪ್ಲಾಸ್ಟಿಕ್ ಹಗ್ಗವನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ– 17 ಎಂದು, ಇನ್ನೊಂದು ಹಗ್ಗವನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ– 18 ಎಂದು, ಒಂದು ಚೆಕ್ಸ ಲುಂಗಿ ನೋಡಿ ಗುರುತಿಸಿದ್ದು, ಅದನ್ನು ಮು.ಮಾ– 19 ಎಂದು ಗುರುತಿಸಲಾಯಿತು. ಪೊಲೀಸರು ಸದರಿ ವಸ್ತುಗಳನ್ನು ಪ್ಯಾಕ್ ಮಾಡಿ, ಫೋಟೋ ತೆಗೆದುಕೊಂಡರು.

ಈ ಹಂತದಲ್ಲಿ ಮಧ್ಯಾಹ್ನದ ಭೋಜನ ವಿರಾಮವಾದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು
ಹಾವೇರಿ.

**ದಿನಾಂಕ:05.08.2026 ರಂದು ಮಧ್ಯಾಹ್ನ 3.15 ಗಂಟೆಗೆ ಸಾಕ್ಷಿಯನ್ನು ಕರೆಸಿ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

4. ಪೊಲೀಸರಿಗೆ ಸ್ಥಳ ಪಂಚನಾಮೆ ಮಾಡಲು ಘಟನಾ ಸ್ಥಳವನ್ನು ಪಿರ್ಯಾದಿ ಫಕ್ಕೀರಪ್ಪ ತೋರಿಸಿದರು. ದಿನಾಂಕಃ27.12.2024 ರಂದು ಬೆಳಿಗ್ಗೆ 10.20 ಗಂಟೆ ಸಮಯದಲ್ಲಿ ನಾನು ಹಾನಗಲ್ ಆಸ್ಪತ್ರೆಯ ಶವಾಗಾರಕ್ಕೆ ಹೋಗಿದ್ದೆನು. ಸದರಿ ಶವಾಗಾರದಲ್ಲಿ ಪ್ರಕಾಶ ಇವರ ಶವವನ್ನು ಇಡಲಾಗಿತ್ತು. ಆಗ ಪೊಲೀಸರು ಸದರಿ ಶವವನ್ನು ಅಳತೆ ಮಾಡಿ, ಪರಿಶೀಲನೆ ನಡೆಸಿರುತ್ತಾರೆ. ಆಗ ಪೊಲೀಸರು ಅಲ್ಲಿ ಶವ ಪಂಚನಾಮೆ ಜರುಗಿಸಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಶವ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–3 ಎಂದು, ನನ್ನ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲಃ 1 ಮತ್ತು 8 ನೇ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ**

ಸಾಕ್ಷಿಯು ಈ ಹಂತದಲ್ಲಿ ತಾನು ದ್ಯಾಮನಕೊಪ್ಪಕ್ಕೆ ಶವ ಸಂಸ್ಕಾರಕ್ಕೆ ಹೋಗಬೇಕೆಂದು ಹೇಳಿ ಸಮಯ ಕೋರಿರುತ್ತಾರೆ. ಆದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು
ಹಾವೇರಿ.